# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 245 (230) |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 06-03-2025 |
| ಉತ್ತರಿಸುವ ಸಚಿವರು | : | ಮಾನ್ಯ ಗೃಹ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಅಗ್ನಿಶಾಮಕ ಇಲಾಖೆಯ ನಿರ್ಲಕ್ಷದಿಂದ ರೂ.165.24 ಕೋಟಿ ಆದಾಯ ಸರ್ಕಾರಕ್ಕೆ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು; (ವಿವರ ನೀಡುವುದು)</td><td>
ಕಟ್ಟಡ ಮಾಲೀಕರು ನಿರಾಕ್ಷೇಪಣಾ ಪತ್ರ ಪಡೆಯದೇ ಮತ್ತು ಕ್ಲಿಯರೆನ್ಸ್ ಪತ್ರ ನವೀಕರಣ ಮಾಡಿಕೊಳ್ಳದೇ ಇಲಾಖೆಗೆ ರೂ.165.24 ಕೋಟಿ ಆದಾಯ ನಷ್ಟವಾಗಿರುವ ವಿಷಯವು ಆಡಿಟ್ ಆಕ್ಷೇಪಣೆಯಿಂದ ಇಲಾಖೆ ಗಮನಕ್ಕೆ ಬಂದಿರುತ್ತದೆ.<br><br>
ನವೀಕರಣ ಕ್ಲಿಯರೆನ್ಸ್ ಪತ್ರಗಳ ಶುಲ್ಕಕ್ಕೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ಒಇ 196 ಕಲಸೇ 2017, ದಿನಾಂಕ:27-10-2017 ರಲ್ಲಿ ತೆರಿಗೆಯೇತರ ಆದಾಯಗಳನ್ನು ಹೆಚ್ಚಿಸಿ, ಪರಿಷ್ಕರಿಸಲಾಗಿರುವುದರಿಂದ ನಿರಾಕ್ಷೇಪಣಾ/ ಕ್ಲಿಯರೆನ್ಸ್ ಪತ್ರಗಳ ನವೀಕರಣಕ್ಕಾಗಿ ಕಟ್ಟಡಗಳ ಮಾಲೀಕರು/ ಅನುಭವದಾರರು ಪಡೆದುಕೊಂಡಿರುವುದಿಲ್ಲ.
<table>
<tr><th rowspan="2">ವರ್ಷ</th><th colspan="2">ಕಟ್ಟಡಗಳ ಸಂಖ್ಯೆ</th><th rowspan="2">ಮೊತ್ತ</th></tr>
<tr><th>ವಸತಿ</th><th>ವಸತಿಯೇತರ</th></tr>
<tr><td>2011 ವರೆಗೆ</td><td>272</td><td>132</td><td>4,33,15,000</td></tr>
<tr><td>2011</td><td>36</td><td>15</td><td>48,25,000</td></tr>
<tr><td>2012</td><td>52</td><td>15</td><td>60,75,000</td></tr>
<tr><td>2013</td><td>46</td><td>24</td><td>67,95,000</td></tr>
<tr><td>2014</td><td>76</td><td>31</td><td>93,35,000</td></tr>
<tr><td>2015</td><td>71</td><td>39</td><td>88,00,000</td></tr>
<tr><td>2016</td><td>89</td><td>32</td><td>95,70,000</td></tr>
<tr><td>2017</td><td>75</td><td>28</td><td>1,12,60,000</td></tr>
<tr><td>2018</td><td>85</td><td>30</td><td>73,00,000</td></tr>
<tr><td>2019</td><td>52</td><td>32</td><td>63,60,000</td></tr>
<tr><td>2020 (upto March -2020)</td><td>22</td><td>16</td><td>27,00,000</td></tr>
<tr><td>Total</td><td>876</td><td>394</td><td>11,57,55,000</td></tr>
</table>
ಮೇಲಿನ ಕಟ್ಟಡಗಳನ್ನು ಪರಿಶೀಲಿಸಿ, ಮೇಲಿನ ಆದೇಶದಂತೆ Clearance Certificate ನೀಡಿದ್ದಲ್ಲಿ ಇಲಾಖೆಗೆ 11.58 ಕೋಟಿ ಬರುತ್ತಿತ್ತು ಎಂದು ವರದಿ ನೀಡಿರುತ್ತಾರೆ.<br><br>
ಮೇಲಿನ ಆದೇಶದಂತೆ NBC ನಿಯಮಗಳು ಪಾಲನೇ ಆಗದೇ ಇರುವುದರಿಂದ(ಈಗಾಗಲೇ ನಿರ್ಮಾಣವಾಗಿರುವ ಕಟ್ಟಡಗಳಾದ್ದರಿಂದ) ಕಟ್ಟಡಗಳಿಗೆ NOC ನೀಡಲು ಸಾಧ್ಯವಾಗುವುದಿಲ್ಲ.
</td></tr>
</table>

ಆದರಿಂದ 153.66 ಕೋಟಿ NOC ನೀಡಿದ್ದರೇ ಬರುತ್ತಿತ್ತು ಎಂದು ಮೇಲೆ ತಿಳಿಸಿರುತ್ತಾರೆ.

**153.66+11.58=165.24** ಕೋಟಿಗಳು ಇಲಾಖಾ ನಿರ್ಲಕ್ಷದಿಂದ ಸಂಭವಿಸಿರುವುದಿಲ್ಲ. NOC ಮತ್ತು CC ಗಳನ್ನು ನೀಡಲು ಸಾಧ್ಯವಾಗದೇ ಇರುವುದರಿಂದ ರಾಜಸ್ವವನ್ನು ಸಂಗ್ರಹಿಸಲು ಸಾಧ್ಯವಾಗಿರುವುದಿಲ್ಲ.

- ಕರ್ನಾಟಕ ರಾಜ್ಯದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುವ ಬಹುಮಹಡಿ ಕಟ್ಟಡಗಳಿಗೆ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯಬೇಕಾಗಿರುತ್ತದೆ.
- ತದನಂತರದಲ್ಲಿ ನಿರಾಕ್ಷೇಪಣಾ ಪತ್ರದಲ್ಲಿ ಶಿಫಾರಸ್ಸು ಮಾಡಲಾಗಿರುವ ಅಗ್ನಿಶಮನ ಮತ್ತು ಅಗ್ನಿನಿವಾರಣೆ ಉಪಕರಣಗಳನ್ನು ಕಟ್ಟಡದಲ್ಲಿ ಅನುಷ್ಠಾನಗೊಳಿಸಿ, ಕ್ಲಿಯರೆನ್ಸ್ ಪತ್ರವನ್ನು ಪಡೆಯಬೇಕಾಗಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 33 ಎಸ್‌ಎಫ್‌ಬಿ 2011, ದಿನಾಂಕ: 07-07-2011 ರನ್ವಯ ಕ್ಲಿಯರೆನ್ಸ್ ಪತ್ರವನ್ನು 02 ವರ್ಷಗಳ ಅವಧಿಗೆ ನೀಡಲಾಗುವುದು.
- ಸದರಿ ಸರ್ಕಾರದ ಆದೇಶವನ್ನು ಪ್ರಶ್ನಿಸಿ, ಕಟ್ಟಡಗಳ ನಿರ್ಮಾಣದಾರರು / ಅನುಭವದಾರರು / ಮಾಲೀಕರು ಮಾನ್ಯ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿರುತ್ತಾರೆ.
- ಅಗ್ನಿಶಾಮಕ . ಮತ್ತು ತುರ್ತು ಸೇವಾ ಇಲಾಖೆಯಿಂದ ಸರ್ಕಾರಕ್ಕೆ ಸಲ್ಲಿಸಲಾದ ಪ್ರಸ್ತಾವನೆಯನ್ವಯ ಸರ್ಕಾರದ ಆದೇಶ ಸಂಖ್ಯೆ: ಒಇ 11 ಕಅಸೇ 2019, ದಿನಾಂಕ:13-09-2019 ರಲ್ಲಿ ಶುಲ್ಕಗಳನ್ನು ಪರಿಷ್ಕರಿಸಿದ ನಂತರ ಕಟ್ಟಡಗಳಿಗೆ ಕ್ಲಿಯರೆನ್ಸ್ ಪತ್ರ ನವೀಕರಣ ಮಾಡಿಸಲು ಮುಂದಾಗಿದ್ದು, ಕ್ಲಿಯರೆನ್ಸ್ ಪತ್ರವನ್ನು ನವೀಕರಣ ಮಾಡಿಕೊಳ್ಳುತ್ತಿರುತ್ತಾರೆ.
- NBC ಪ್ರಕಾರ ಕಟ್ಟಡದ ಎತ್ತರಕ್ಕೆ ಅನುಗುಣವಾಗಿ ಮೂರನೇ ಒಂದು ಭಾಗ ಕಟ್ಟಡದ ಸುತ್ತ(Set Back) ಅಗತ್ಯ ತೆರದ ಪ್ರದೇಶದಲ್ಲಿ ಅಗ್ನಿಶಾಮಕ ವಾಹನ ಚಲಿಸಲು ಅಗತ್ಯ ಸ್ಥಳವಕಾಶ ನೀಡಬೇಕಾಗಿದ್ದು, ಚಲನಾ ಪ್ರದೇಶದ ಲಭ್ಯತೆ ಇಲ್ಲದಿರುವುದರಿಂದ ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 33 ಎಸ್‌ಎಫ್‌ಬಿ 2011, ದಿನಾಂಕ: 07-07-2011 ರನ್ವಯ ನಿರಾಕ್ಷೇಪಣಾ ಪತ್ರಗಳನ್ನು ನೀಡಲು ಸಾಧ್ಯವಾಗಿರುವುದಿಲ್ಲ.
- ಪ್ರಸ್ತುತ ಕ್ಲಿಯರೆನ್ಸ್ ಪತ್ರಗಳನ್ನು ಪಡೆದು ಕೊಂಡಿರುವ ಎಲ್ಲಾ ಬಹುಮಹಡಿ ಕಟ್ಟಡಗಳಿಗೆ ಕ್ಲೀಯರೆನ್ಸ್ ಪತ್ರವನ್ನು ನವೀಕರಿಸಿಕೊಳ್ಳುವಂತೆ ಸೂಚಿಸಿ, ಸಂಬಂಧಪಟ್ಟ ಕಟ್ಟಡದ ಮಾಲೀಕರುಗಳಿಗೆ ಸೂಚನಾ ಪತ್ರಗಳನ್ನು ಜಾರಿ ಮಾಡಲಾಗಿರುತ್ತದೆ.

ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಇಲಾಖೆಯಿಂದ ಕಳೆದ 05 ವರ್ಷಗಳಲ್ಲಿ ಈ ಕೆಳಕಂಡಂತೆ ರಾಜಸ್ವ ಸಂದಾಯವಾಗಿರುತ್ತದೆ.

| ವರ್ಷ | ರೂ. |
|---|---|
| 2019-20 | 78,25,29,306/- |
| 2020-21 | 49,38,99,580/- |
| 2021-22 | 55,80,18,714/- |
| 2022-23 | 64,95,45,849/- |
| 2023-24 | 77,63,18,661/- |
| 2024-25 | 115,91,83,500/- |
| **ಒಟ್ಟು** | **441,94,95,610/-** |

| | | |
|---|---|---|
| ಆ) | ಅಗ್ನಿ ಸಂರಕ್ಷಣಾ ನಿಬಂದನೆಗಳನ್ನು ಪರಿಶೀಲನೆ ನಡೆಸದೇ ಇರಲು ಕಾರಣಗಳೇನು ರಾಜ್ಯದ ಪ್ರಮುಖ 07 ನಗರಗಳ 19,640 ಕಟ್ಟಡಗಳ ಪೈಕಿ ಕೇವಲ 2062 ಕಟ್ಟಡಗಳಿಗೆ ಮಾತ್ರವೇ ಅಗ್ನಿ ಸುರಕ್ಷತಾ ಪ್ರಮಾಣ ಪತ್ರವನ್ನು ಪಡೆದ ಬಳಿಕ ಒಸಿ ಗಳನ್ನು ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದ ಪ್ರಮುಖ 07 ನಗರಗಳಲ್ಲಿ 19,640 ಕಟ್ಟಡಗಳ ಪೈಕಿ 4274 ಕಟ್ಟಡದವರು ನಿರಾಕ್ಷೇಪಣಾ ಪತ್ರಗಳನ್ನು ಪಡೆದಿದ್ದು, 2062 ಕಟ್ಟಡದವರು ಕ್ಲಿಯರೆನ್ಸ್ ಪತ್ರ ಪಡೆದಿರುತ್ತಾರೆ.<br><br>ಇನ್ನುಳಿದಂತೆ, 15,366 ಕಟ್ಟಡದವರು ನಿರಾಕ್ಷೇಪಣಾ ಪತ್ರ ಪಡೆಯದೆ ನಿರ್ಮಾಣ ಮಾಡಿರುತ್ತಾರೆ. ಸದರಿ ಕಟ್ಟಡಗಳಲ್ಲಿ NBC ರನ್ವಯ ಅಗತ್ಯ ತೆರೆದ ಪ್ರದೇಶ, ಚಲನಾ ಪ್ರದೇಶದ ಲಭ್ಯತೆ ಇಲ್ಲದಿರುವುದರಿಂದ ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 33 ಎಸ್‌ಎಫ್‌ಬಿ 2011, ದಿನಾಂಕ: 07-07-2011 ರನ್ವಯ ನಿರಾಕ್ಷೇಪಣಾ ಪತ್ರಗಳನ್ನು ನೀಡಲು ಸಾಧ್ಯವಾಗಿರುವುದಿಲ್ಲ.<br><br>ಸರ್ಕಾರದ ಆದೇಶ ಸಂ: ಸಂವ್ಯಶಾಇ 12 ಶಾಸನ 2023, ಬೆಂಗಳೂರು, ದಿನಾಂಕ:27-07-2023 ರನ್ವಯ 21.00 ಮೀಟರ್ ಹಾಗೂ ಮೇಲ್ಪಟ್ಟ ಎತ್ತರದ ಅನಧಿಕೃತವಾಗಿ ನಿರ್ಮಾಣ ಮಾಡಲಾಗಿರುವ ಎಲ್ಲಾ 505 ಬಹುಮಹಡಿ ಕಟ್ಟಡಗಳನ್ನು ಗುರುತಿಸಿ, NBC ರನ್ವಯ ಅಗ್ನಿ ಸುರಕ್ಷತಾ ಕ್ರಮಗಳನ್ನು ಪಾಲಿಸಲು ಸೂಚನಾ ಪತ್ರಗಳನ್ನು ಜಾರಿ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |
| ಇ) | ಬಂದಿದ್ದಲ್ಲಿ, ಇದರಿಂದಾಗುವ ಪ್ರಾಣ ಹಾನಿಗಳಿಗೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ; ಈ ಕುರಿತು ಸರ್ಕಾರದ ನಿಲುವೇನು? | ಕರ್ನಾಟಕ ಅಗ್ನಿಶಾಮಕ ದಳ ಕಾಯ್ದೆ 1964, ರ ಸೆಕ್ಷನ್(13) ರನ್ವಯ ಸಂಬಂಧಪಟ್ಟವರು ಹೊಣೆಗಾರರಾಗಿರುತ್ತಾರೆ. ಸದರಿ ಕಾಯ್ದೆಯ ಸೆಕ್ಷನ್ (13)ರ ವಿವರ ಈ ಕೆಳಕಂಡಂತಿರುತ್ತದೆ.<br><br>13. Preventive measures.—(1) The State Government may by notification in the official Gazette, require owners or occupiers of premises in any area or any class of premises used for purposes which in its opinion are likely to cause a risk of fire, to take such precautions as may be specified in such notification |

**ಸಂಖ್ಯೆ: ಹೆಚ್‌ಡಿ 53 ಎಸ್‌ಎಫ್‌ಬಿ 2025**

**(ಡಾ. ಜಿ. ಪರಮೇಶ್ವರ)**
**ಗೃಹ ಸಚಿವರು**